

# ಎಥಿಕಲ್ ಹ್ಯಾಕರ್ಸ್



**ಕೆಲವು ಸಂಸ್ಥೆಗಳು ತಮ್ಮ ಸುರಕ್ಷತಾ ವಿಧಾನವನ್ನು ಸರಿಪಡಿಸಲು ಎಥಿಕಲ್ ಹ್ಯಾಕರ್ಸ್‌ಗಳನ್ನು ತಮ್ಮಲ್ಲಿ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಇವರು ಪರವಾನಗಿ ಪಡೆದ ಹ್ಯಾಕರ್ಸ್‌ಗಳು.**

■ **ಲಾವಣ್ಯಗೌರಿ ವೆಂಕಟೇಶ್**

### ಯಾರಿವರು! ಎಥಿಕಲ್ ಹ್ಯಾಕರ್ಸ್ ?

ಹ್ಯಾಕರ್ಸ್ ಎಂದಾಕ್ಷಣ ಎಲ್ಲರಿಗೂ ನೆನಪಿಗೆ ಬರುವುದುಸೈಬರ್‌ಕ್ರೈಮ್‌ಎಂದೇ!ಹ್ಯಾಕರ್‌ಎಂದರೆ ಕಂಪ್ಯೂಟರ್‌ನಲ್ಲಿರುವ ಮಾಹಿತಿಗಳನ್ನು ಅತಿಕ್ರಮವಾಗಿ ಪಡೆಯುವವ ಎಂದರ್ಥ. ಈ ಹ್ಯಾಕರ್‌ಗಳು ಮಾಹಿತಿಗಳನ್ನು ಕದಿಯುವುದು ಕೇವಲ ಕಂಪ್ಯೂಟರ್ ಒಂದರಿಂದಲೇ ಅಲ್ಲ – ಮೊಬೈಲ್ ಡಿವೈಸ್‌ನಲ್ಲಿನ ಪಾಸ್‌ವರ್ಡ್ ಕದಿಯುವುದೂ ಇದೆ. ಮಾಲೀಕರ ಅಪ್ಪಣೆಯಿಲ್ಲದೆ ಆ ಡಿವೈಸ್ ಅನ್ನು ಬಳಸುವುದು, ವೈರಸ್ ಕೋಡ್‌ಗಳನ್ನು ಬರೆಯುವುದು, ಕಂಪ್ಯೂಟರ್ ಅಥವಾ ಸ್ಮಾರ್ಟ್ ಫೋನ್‌ನಲ್ಲಿರುವ ಮಾಹಿತಿಗಳನ್ನು ಹಾಳು ಮಾಡುವುದು ಹಾಗೂ ರಿವರ್ಸ್ ಎಂಜಿನಿಯರಿಂಗ್ (ಮಾನವ ನಿರ್ಮಿತ ಭೌತಿಕ ವಸ್ತುಗಳನ್ನು ಬಿಡಿಸಿ ಹೇಗೆ ರಚಿಸಿದ್ದಾರೆಂದು ತಿಳಿದುಕೊಳ್ಳುವುದು), ಇವು ಬಹುತೇಕ ಹ್ಯಾಕರ್‌ಗಳು ಮಾಡುವ ಕೆಲಸ. ಕುತೂಹಲಕ್ಕಾಗಿ, ಅನ್ವೇಷಣೆಗಾಗಿ, ಅರಿವಿಗಾಗಿ ಶುರುವಾದ ಈ ಹ್ಯಾಕಿಂಗ್ ಇದೀಗ ಸಂಪಾದನೆಗಾಗಿ, ಲಾಭಕ್ಕಾಗಿ ನಡೆಯುತ್ತಿದೆ.

ಹ್ಯಾಕರ್‌ಗಳಲ್ಲೂ ಪರವಾನಗಿ ಪಡೆದಿರುವ 'ಸರ್ಟಿಫೈಡ್ ಎಥಿಕಲ್ ಹ್ಯಾಕರ್ಸ್' ಇರುತ್ತಾರೆ. ಕೆಲವು ಸಂಸ್ಥೆಗಳು ತಮ್ಮ ಸುರಕ್ಷತಾ ವಿಧಾನವನ್ನು ಸರಿಪಡಿಸಲು ಎಥಿಕಲ್ ಹ್ಯಾಕರ್ಸ್‌ಗಳನ್ನು ತಮ್ಮಲ್ಲಿ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಇವರು ಪರವಾನಗಿ ಪಡೆದ ಹ್ಯಾಕರ್ಸ್‌ಗಳಾಗಿರುತ್ತಾರೆ. ಮಾಲೀಕರ ಅಪ್ಪಣೆಯ ಮೇರೆಗೇ ಅವರ ಯಂತ್ರಗಳ ಭೇದಿಸುತ್ತಾರೆ.

ಸರ್ಟಿಫೈಡ್ ಎಥಿಕಲ್ ಹ್ಯಾಕರ್ಸ್‌ಗಳು ಚಾತುರ್ಯವುಳ್ಳ ವೃತ್ತಿನಿರತರಾಗಿರುತ್ತಾರೆ. ಅವರು ಕಂಪ್ಯೂಟರ್ ಜಾಲಗಳನ್ನು ಭೇದಿಸಿ ಒಳನುಗ್ಗುವುದು ಹೇಗೆ ಎಂಬ ಅರಿವು ಹೊಂದಿರುತ್ತಾರೆ.

ಸರ್ಟಿಫೈಡ್ ಎಥಿಕಲ್ ಹ್ಯಾಕರ್ಸ್‌ಗಳನ್ನು ರೂಪಿಸಲು ಶಿಕ್ಷಣ ಸಂಸ್ಥೆಗಳಿವೆ. ಅಲ್ಲಿ ಹ್ಯಾಕ್ ಮಾಡುವ ತಂತ್ರಗಳು ಹಾಗೂ ಸಾಧನಗಳನ್ನು ಹೇಳಿಕೊಡಲಾಗುತ್ತದೆ. ಈ ಶಿಕ್ಷಣ ಸಂಸ್ಥೆಗಳಲ್ಲಿ ಕಂಪ್ಯೂಟರ್ ಜಾಲವನ್ನು ಭೇದಿಸುವ ವಿಧಾನವನ್ನು ತಿಳಿಸಿಕೊಡುತ್ತಾರೆ. ತಮ್ಮದೇ ಸಿಸ್ಟಮ್‌ಗಳನ್ನು ಭೇದಿಸಿ, ಸ್ಕ್ಯಾನ್ ಮಾಡಿ, ಪರೀಕ್ಷಿಸಿ, ಹ್ಯಾಕ್ ಮಾಡಿ ನೋಡಬೇಕಾಗುತ್ತದೆ. ಎಥಿಕಲ್ ಹ್ಯಾಕಿಂಗ್ ಅನ್ನು ಕಲಿಯುವವರ ಗುರಿ ಸದಾ ಕಾಲ ಸಿಸ್ಟಮ್ ಭೇದಿಸಲು ಸಫಲರಾಗುವತ್ತ ಇರಬೇಕಾಗುತ್ತದೆ. ಇಲ್ಲಿ ಬೇಹುಗಾರಿಕೆ, ಸಿಸ್ಟಮ್‌ನ ಪ್ರವೇಶ, ಪಟ್ಟಿ ಮಾಡುವಿಕೆ ಹಾಗೂ ನಿರ್ವಹಣೆಯ ಬಗ್ಗೆ ಶಿಕ್ಷಣವನ್ನು ಕೊಡುತ್ತಾರೆ.

ಬಹಳಷ್ಟು ಐಟಿ ಕಂಪನಿಗಳು ತಮ್ಮ ಸೆಕ್ಯುರಿಟಿ ಪೋಸ್ಟ್‌ಗಳಲ್ಲಿ ಈ ಸರ್ಟಿಫೈಡ್ ಎಥಿಕಲ್ ಹ್ಯಾಕರ್ಸ್ ಸರ್ಟಿಫಿಕೇಶನ್ ಅನ್ನು ಕಡ್ಡಾಯ ಮಾಡಿವೆ. ತಾಂತ್ರಿಕತೆ ಮುಂದುವರಿದಂತೆಲ್ಲಾ ಕಳ್ಳತನವೂ ಮುಂದುವರಿಯುತ್ತಲೇ ಇದೆ. ಎಷ್ಟೇ ಸುರಕ್ಷತೆ ಇದ್ದರೂ ಅದನ್ನು ಒಡೆದು ಒಳನುಗ್ಗಿ ಕದಿಯುವ ಕಳ್ಳರ ಚಾಣಾಕ್ಷತೆಯೂ ಹೆಚ್ಚಾಗಿಯೇ ಇದೆ. ಎಲೆಕ್ಟ್ರಾನಿಕ್ಸ್ ಕಾಮರ್ಸ್ ಕೌನ್ಸಿಲ್ (ಇ.ಸಿ. ಕೌನ್ಸಿಲ್) ಅವರು ಎಥಿಕಲ್ ಹ್ಯಾಕರ್ಸ್‌ಗಳನ್ನು 'ಬಾಡಿಗಾರ್ಡ್ಸ್ ಆಫ್ ಕಂಪ್ಯೂಟರ್ ಸಿಸ್ಟಮ್ಸ್' ಅಂದರೆ 'ಗಣಕಯಂತ್ರ ವ್ಯವಸ್ಥೆಯ ಅಂಗರಕ್ಷಕರು' ಎಂದು ಹೇಳಿದ್ದಾರೆ. ಈ ರೀತಿಯ ಎಥಿಕಲ್ ಹ್ಯಾಕರ್ಸ್ ಆಗಲು ಕಂಪ್ಯೂಟರ್ ಸಿಸ್ಟಮ್‌ನ ಪರಿಣಿತರಾಗಿರಬೇಕಾಗುತ್ತದೆ. ಕಂಪ್ಯೂಟರ್ ಜಾಲದ ಬಗ್ಗೆ ಕೌಶಲ್ಯ ಹೊಂದಿರಬೇಕಾಗುತ್ತದೆ.

ಎಥಿಕಲ್ ಹ್ಯಾಕರ್ಸ್ ಆಗುವವರಿಗೆ ಬುದ್ಧಿವಂತಿಕೆ, ಸಹನೆ ಹಾಗೂ ಸಾಮಾನ್ಯ ಜ್ಞಾನ ಬೇಕಾಗುತ್ತದೆ. ತಾಂತ್ರಿಕ ಮತ್ತು ಸಂಘಟನೆಯ ಚತುರತೆ ಬಹಳ ಮುಖ್ಯವಾಗಿ ಬೇಕಾಗುತ್ತದೆ. ನಿರೀಕ್ಷಿತ ಫಲಿತಾಂಶ ಸಿಗುವವರೆಗೂ ನಿರಂತರವಾಗಿ ಪದೇ ಪದೇ ಪ್ರಯತ್ನಪಡಬೇಕಾಗುತ್ತದೆ.

ಹ್ಯಾಕರ್ಸ್‌ಗಳನ್ನು ವೈಟ್ ಹ್ಯಾಟ್ ಹ್ಯಾಕರ್ಸ್, ಗ್ರೇ ಹ್ಯಾಟ್ ಹ್ಯಾಕರ್ಸ್, ಬ್ಲಾಕ್ ಹ್ಯಾಟ್ ಹ್ಯಾಕರ್ಸ್ – ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ವೈಟ್ ಹ್ಯಾಟ್ ಹ್ಯಾಕರ್ಸ್‌ಗಳು ಮಾಲೀಕರ ಅಪ್ಪಣೆಯ ಮೇರೆಗೆ ಸಿಸ್ಟಮ್ ಅನ್ನು ಭೇದಿಸುವುದರಿಂದ ಅವರ ಕೆಲಸ ನ್ಯಾಯಯುತವಾಗಿಯೇ ಇರುತ್ತದೆ. ಆದರೆ ಬ್ಲಾಕ್ ಹ್ಯಾಟ್ ಹ್ಯಾಕರ್ಸ್‌ಗಳು ದ್ವೇಷದ ಉದ್ದೇಶ ಅಥವಾ ಕದಿಯುವ ಇರಾದೆಯಿಂದ ಹ್ಯಾಕ್ ಮಾಡುತ್ತಾರೆ.

ಸುರಕ್ಷತೆ, ಭದ್ರತೆ ಎನ್ನುವುದು ಇಂದಿನ ಯುಗದಲ್ಲಿ ಬಹಳ ಮಹತ್ವಪೂರ್ಣವುಳ್ಳದ್ದಾಗಿದೆ. ಇದು ಕೇವಲ ಭೌತಿಕ ಅಥವಾ ಭೂರಚನೆಯ ಭದ್ರತೆ ಮಾತ್ರವಲ್ಲದೆ ಸೈಬರ್ ಸ್ಪೇಸ್ ಅನ್ನೂ ಒಳಗೊಂಡಿದೆ. ದೇಶದ ಗಡಿಯನ್ನು ಕಾಯುವಷ್ಟೇ ಮುಖ್ಯವಾಗಿ ಸೈಬರ್ ಸೆಕ್ಯೂರಿಟಿಯನ್ನೂ ಭದ್ರಗೊಳಿಸಬೇಕು. ನಮ್ಮ ಭಾರತ ದೇಶದ ಸೈಬರ್ ಆರ್ಮಿ ಸರ್ಕಾರಕ್ಕೆ ಬದ್ಧವಾಗಿ ಕಾರ್ಯವನ್ನು ನಿರ್ವಹಿಸುತ್ತದೆ. ಇಂಡಿಯನ್ ಸೈಬರ್ ಆರ್ಮಿಯು ಭಾರತವನ್ನು ಡಿಜಿಟಲ್ ಸುರಕ್ಷಿತವಾಗಿ ಇರುವಂತೆ ನೋಡಿಕೊಳ್ಳುತ್ತದೆ ಹಾಗೂ ನ್ಯಾಷನಲ್ ಪೊಲೀಸ್ ಮತ್ತು ಇಂಟೆಲಿಜೆನ್ಸ್ ಏಜೆನ್ಸಿಗೂ ಸಹಾಯ ಮಾಡುತ್ತದೆ.

ಹ್ಯಾಕರ್ ಎನ್ನುವ ಪದವೇ ಬೆಚ್ಚಿ ಬೀಳಿಸುವಂಥದ್ದು. ಆದರೆ ಈ ಎಥಿಕಲ್ ಹ್ಯಾಕರ್ಸ್‌ನ ಕೆಲಸ ಬಹಳ ಜವಾಬ್ದಾರಿಯುತವಾದದ್ದು. ಬರೀ ಐ.ಟಿ ಕಂಪನಿಗಳೇ ಅಲ್ಲದೆ ಬ್ಯಾಂಕ್‌ಗಳಲ್ಲಿಯೂ ಸಹ ಇವರ ಪಾತ್ರ ಮುಖ್ಯವಾದದ್ದು. ■